# ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳು: ಜೂನ್ ೨೦೧೯



ಪುರಿ : ಚಂಡಮಾರುತ ಪರಿಹಾರ



ಮಾನಸದ್ವೀಪ: ಚಂಡಮಾರುತ ಪರಿಹಾರ



ಚೆನ್ನೈ : ಬೆಂಕಿ ಆಕಸ್ಮಿಕ ಪರಿಹಾರ



ಸಂತ್ರಸ್ತ ಪರಿಹಾರ : ಕೂಚ್ ಬಿಹಾರ್



ಕೇರಳ ನೆರೆ ಪರಿಹಾರ ಕಾರ್ಯ : ತಿರುವಲ್ಲ

ದೇಶದ ವಿವಿಧ ಪ್ರದೇಶಗಳಲ್ಲಿ ರಾಮಕೃಷ್ಣ ಮಹಾಸಂಘವು ೨೦೧೯ರ ಜೂನ್‌ರ ತನದ ನಡೆಸಿದ ಪರಿಹಾರ ಕಾರ್ಯಗಳ ಒಂದು ಸಂಕ್ಷಿಪ್ತ ನೋಟ ಈ ಕೆಳಗಿನಂತಿದೆ:

೧. **ಚಂಡಮಾರುತ ಪರಿಹಾರ :** ಭೀಕರಸ್ವರೂಪದ ಚಂಡಮಾರುತ 'ಫಣಿ'ಯು ಮೇ 3ರಂದು ಒಡಿಶಾದ ಪುರಿಯನ್ನು ಪ್ರವೇಶಿಸಿತು. ಒಡಿಶಾದ ಹಲವು ಪ್ರದೇಶಗಳಲ್ಲಿ ಈ ಚಂಡ ಮಾರುತವು ಅನೇಕ ಮನೆಗಳಿಗೆ ಹಾಗೂ ಸಾರ್ವಜನಿಕ ಕಟ್ಟಡಗಳಿಗೆ ಹಾನಿಯನ್ನುಂಟುಮಾಡಿತು; ಪಶ್ಚಿಮ ಬಂಗಾಳದ ಕೆಲವು ಪ್ರದೇಶಗಳಲ್ಲೂ ಹಾನಿಯುಂಟಾಗಿದೆ. ಹಲವು ಶಾಖಾಕೇಂದ್ರಗಳು ವಿವಿಧ ಪ್ರದೇಶಗಳಲ್ಲಿ ನಡೆಸಿದ ಪರಿಹಾರಕಾರ್ಯಗಳು ಹೀಗಿವೆ:

ಅ) **ಒಡಿಶಾ: ಪುರಿ ಮಿಷನ್** ೧೨೦೦ ಸೀರೆ, ೧೨೦೦ ಲುಂಗಿ, ೧೨೦೦ ಅಡ್ಡಪಂಚೆ, ೧೨೦೦ ಬಿಸ್ಕತ್ತು ಪ್ಯಾಕೆಟ್ ಇವುಗಳನ್ನು ಮೇ ೧೯ರಂದು ೧೨೦೦ ಕುಟುಂಬಗಳಿಗೆ ವಿತರಿಸಿತು.

**ಭುವನೇಶ್ವರ, ಪುರಿ ಮಠ** ಹಾಗೂ **ಪುರಿ ಮಿಷನ್** ಶಾಖಾಕೇಂದ್ರಗಳು ಹಾನಿಗೊಳಗಾದ ಪ್ರದೇಶಗಳ ಸರ್ವೇಕ್ಷಣೆ ನಡೆಸಿ, ಅಲ್ಲಿ ನಡೆಸಬೇಕಾದ ಪರಿಹಾರ ಕಾರ್ಯಗಳ ಚಾಲನೆ ಯಲ್ಲಿ ನಿರತವಾಗಿವೆ. ಹೆಚ್ಚಿನ ವರದಿಯನ್ನು ನಿರೀಕ್ಷಿಸಲಾಗಿದೆ.

ಆ) **ಪಶ್ಚಿಮ ಬಂಗಾಳ: ಮಾನಸದ್ವೀಪ** ಆಶ್ರಮವು ಮೇ ೨೮ರಂದು ೧೧ ಕುಟುಂಬಗಳಿಗೆ ೮೫ ಹೆಂಚಿನ ಶೀಟುಗಳು, ೨೨ ಸ್ಟೀಲ್ ಪೈಪುಗಳು, ೧೬ ಕಾಂಕ್ರೀಟ್ ಸರಳುಗಳು, ೧೨ ಬಿದಿರಿನ ಗಳು, ೮ ಟರ್ಪಾಲಿನ್, ೭ ಟಿನ್ ಶೀಟ್‌ಗಳು, ೪೦ ಹೆಂಚು, ೧ ಚೀಲ ಸಿಮೆಂಟು ಹಾಗೂ ೫ ಬ್ಯಾಗ್ ಮರಳು ಇವನ್ನು ವಿತರಿಸಿದೆ.

೨. **ಬರ ಪರಿಹಾರ: ಮಹಾರಾಷ್ಟ್ರ : ಔರಂಗಾಬಾದ್** ಆಶ್ರಮವು ಮೇ ೧೩ರಿಂದ ೨೪ರ ವರೆಗೆ ೧೫೦ ಬರಪೀಡಿತ ಕುಟುಂಬಗಳಿಗೆ ೧೫೦ ನೀರು ಸಂಗ್ರಹಿಸುವ ಪಾತ್ರೆಗಳನ್ನು ವಿತರಿಸಿದೆ.

೩. **ಬೇಸಿಗೆ ಪರಿಹಾರ ಕಾರ್ಯ: ತಮಿಳುನಾಡು: ಮದುರೈ** ಆಶ್ರಮವು ಏಪ್ರಿಲ್ ೧೯ರಿಂದ ೨೨ರ ವರೆಗೆ ಮದುರೈಯಲ್ಲಿನ ಪ್ರಯಾಣಿಕರಿಗೆ ೬೦೦ ಲೀಟರ್ ಮಜ್ಜಿಗೆಯನ್ನು ವಿತರಿಸಿದೆ.

೪. **ಬೆಂಕಿ ಆಕಸ್ಮಿಕ ಪರಿಹಾರ: ತಮಿಳುನಾಡು :** ಮೇ ೧೮ರಂದು ಚೆನ್ನೈನ ಮೈಲಾಪುರದಲ್ಲಿ ನಡೆದ ಬೆಂಕಿ ಆಕಸ್ಮಿಕದಲ್ಲಿ ೧೩ ಗುಡಿಸಲುಗಳು ಸುಟ್ಟುಹೋಗಿವೆ. ಇದರಿಂದ ಹಾನಿಗೊಳಗಾದ ೧೬ ಕುಟುಂಬಗಳಿಗೆ ಚೆನ್ನೈ ಆಶ್ರಮವು ೪೦ ಲುಂಗಿ, ೪೦ ಸೀರೆ, ೧೬ ಅಂಗಿ, ೪೦ ಚಡ್ಡಿ, ೪೦ ಅಡ್ಡ ಪಂಚೆ, ಮಕ್ಕಳ ಬಟ್ಟೆಬರೆ, ೪೮ ಪಾತ್ರೆಗಳು, ೧೬ ಕಾವಲಿ, ೯೬ ತಟ್ಟೆ, ೬೪ ಚಮಚ, ೬೪ ಲೋಟ ಹಾಗೂ ೩೨ ಚಾಪೆ ಇವನ್ನು ವಿತರಿಸಿದೆ.

೫. **ಸಂತ್ರಸ್ತ ಪರಿಹಾರ:** ಈ ಕೆಳಗಿನ ಆಶ್ರಮಗಳ ಅಗತ್ಯವಿರುವ ಜನರಿಗೆ ವಿವಿಧ ವಸ್ತುಗಳನ್ನು ವಿತರಿಸಿವೆ: ಅ) **ಆಲೋ:** ಮೇ ೫ ರಿಂದ ೧೨ರ ವರೆಗೆ ೩೨೮ ಅಂಗಿ, ೩೬೧ ಚಡ್ಡಿ, ೨೯ ಜಾಕೆಟ್, ೩೬೧ ಸ್ವೆಟರ್ ಇವನ್ನು ವಿತರಿಸಿದೆ. ಆ) **ಬಾರಾನಗರ ಮಿಷನ್:** ಮೇ ೭ ರಂದು ೧೦ ಸೀರೆ, ೧೦೦ ಬೆಡ್‌ಶೀಟ್, ೧೦೦ ಸೊಳ್ಳೆ ಪರದೆ, ೧೦ ತಟ್ಟೆ, ೧೦ ಬಟ್ಟಲು, ೧೬ ಕೂದಲೆಣ್ಣೆ ಸೀಸೆ, ೧೬೪ ಪ್ಯಾಕೆಟ್ ಸಾಬೂನು ಪುಡಿ, ೧೬೪ಟೂತ್‌ಪೇಸ್ಟ್, ೧೬೪ ಟೂತ್‌ಬ್ರಷ್. ಇ) **ಕೂಚ್‌ಬಿಹಾರ್:** ಮಾರ್ಚ್ ೧೭ ರಂದು ೩೦೦೦ ಅಂಗಿ, ೪೭೫ ಜಾಕೆಟ್, ೨೫ ಸ್ವೆಟರ್. ಈ) **ಕೊಯಿಲಾಂಡಿ:** ಮೇ ೧೮ ರಂದು ೨೨ ಟರ್ಪಾಲಿನ್, ೨೦ ಸೋಲಾರ್‌ದೀಪಗಳು, ೨೨ ಕಂಬಳಿಗಳು. ಉ) **ವೃಂದಾವನ:** ಮೇ ೭ ರಂದು ೪೫೦ ಕಿಲೋ ಅಕ್ಕಿ, ೪೫೦ ಕಿಲೋ ಗೋಧಿಹಿಟ್ಟು, ೧೧೨ ಕಿಲೋ ತೊಗರಿಬೇಳೆ, ೧೧೨ ಕಿಲೋ ಅಡುಗೆ ಎಣ್ಣೆ, ೨೨ ಕಿಲೋ ಉಪ್ಪು, ೫೬ಕಿಲೋ ಸಕ್ಕರೆ, ೪೫ ಕಿಲೋ ಚಹಾಸೊಪ್ಪು, ೫೬ ಕಿಲೋ ಹಾಲಿನಪುಡಿ ಹಾಗೂ ೨೨೫ ಬಾರ್‌ಸೋಪು.

೬. **ನೆರೆ ಪರಿಹಾರ ಕಾರ್ಯ : ಕೇರಳ :** ೨೦೧೮ರ ಆಗಸ್ಟ್ ತಿಂಗಳಲ್ಲಿ ಕೇರಳದಲ್ಲಿ ಉಂಟಾದ ನೆರೆ ಹಾವಳಿಯ ನಂತರ ತಿರುವಲ್ಲ ಆಶ್ರಮವು ಒಂದು ಜಲ ನಿರ್ಮಲೀಕರಣ ಕೇಂದ್ರವನ್ನು ಸ್ಥಾಪಿಸಿದೆ; ಒಂದು ಬಾವಿಯನ್ನು ಸ್ವಚ್ಛಗೊಳಿಸಿದೆ. ಸೆಪ್ಟೆಂಬರ್ ೭ ರಿಂದ ಜನವರಿ ೨೪ರ ವರೆಗೆ ಪತ್ತನಂತಿಟ್ಟ ಹಾಗೂ ಆಲಪ್ಪುಳ ಜಿಲ್ಲೆಗಳಲ್ಲಿನ ೩೬೦ ಕುಟುಂಬಗಳಿಗೆ ೧೦ ಕಂಪ್ಯೂಟರ್, ೩ ಪ್ರಿಂಟರ್ ಹಾಗೂ ಒಂದು ಕ್ಯಾಮರಾ ಇವನ್ನು ವಿತರಿಸಿದೆ.

Managing Editor : Swami Muktidananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020